ಅ) ತೀರ್ಥಹಳ್ಳಿ ತಾಲ್ಲೂಕಿಗೆ 2001 ರಿಂದ ಈವರೆಗೆ ಮಂಜೂರಾದ ಏತ ನೀರಾವರಿ ಯೋಜನೆಗಳು ಯಾವುವು: ಇವುಗಳಿಗೆ ನಿಗದಿಪಡಿಸಿದ ಹಾಗೂ ಖರ್ಚಾದ ಹಣ ಎಷ್ಟು;

ಆ) ಕಾಮಗಾರಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಯೋಜನೆಗಳು ಯಾವುವು: (ಕಾಮಗಾರಿವಾರು ವಿವರ ನೀಡುವುದು);

ಇ) ಅಪೂರ್ಣಗೊಂಡ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಮತ್ತು ಅದಕ್ಕೆ ಬೇಕಾದ ಅಂದಾಜು ವೆಚ್ಚವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ತೀರ್ಥಹಳ್ಳಿ ತಾಲ್ಲೂಕಿಗೆ 2001 ರಿಂದ ಈವರೆಗೆ ಯಾವುದೇ ಏತ ನೀರಾವರಿ ಯೋಜನೆಗಳು ಮಂಜೂರಾಗಿರುವುದಿಲ್ಲ.

ಆ) ಮತ್ತು ಇ) ಹಾಲಿ ಪ್ರಗತಿಯಲ್ಲಿರುವ ಮೂರು ಏತ ನೀರಾವರಿ ಯೋಜನೆಗಳ ವಿವರ ಕೆಳಕಂಡಂತಿವೆ.

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಪೂರ್ಣಗೊಳಿಸಲು ಬೇಕಾದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	2	3	4	5
1)	ಹೊಸಹಳ್ಳಿ ಹತ್ತಿರ ಏತ ನೀರಾವರಿ ಯೋಜನೆ	1999–2000	106.00	70.00 ಲಕ್ಷ
2)	ಮೀನಗುಂದ ಏತ ನೀರಾವರಿ ಯೋಜನೆ	1997–1998	30.00	15.00 ಲಕ್ಷ
3)	ದಬ್ಬಣಗದ್ದೆ ಏತ ನೀರಾವರಿ ಯೋಜನೆ	1999–2000	30.00	30.00 ಲಕ್ಷ
		ಒಟ್ಟು		**115.00** ಲಕ್ಷ

ಮೇಲೆ ತಿಳಿಸಿರುವ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಅನುದಾನದ ಲಭ್ಯತೆಯ ಮೇಲೆ ಪೂರ್ಣಗೊಳಿಸಲಾಗುವುದು.

ತೀರ್ಥಹಳ್ಳಿ ತಾಲ್ಲೂಕಿನ ಹೊಸನಗರ ಮತ್ತು ಸಾಗರ ತಾಲ್ಲೂಕುಗಳಲ್ಲಿನ ಮಜಿರೆ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ

2544(3137) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೀರ್ಥಹಳ್ಳಿ ಹೊಸನಗರ ಮತ್ತು ಸಾಗರ ತಾಲ್ಲೂಕಿಗೆ REC ಮೂಲಕ ಮಜಿರೆ ಹಳ್ಳಿಗಳ ಹೊಸ ವಿದ್ಯುತ್ ಸಂಪರ್ಕಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಆ) ಎಷ್ಟು ಹಳ್ಳಿಗಳ ಕಾಮಗಾರಿ ಪೂರ್ಣಗೊಂಡಿದೆ: (ತಾಲ್ಲೂಕವಾರು ವಿವರ ನೀಡುವುದು);

ಇ) ಈ ಕಾಮಗಾರಿಗಳು ಯಾವ ಸಾಲಿನಲ್ಲಿ ಪ್ರಾರಂಭ ಮಾಡಲಾಯಿತು. ಗುತ್ತಿಗೆ ನಿಬಂಧನೆಯಂತೆ ಕಾಮಗಾರಿಯು ಯಾವಾಗ ಪೂರ್ಣಗೊಳ್ಳಬೇಕಿತ್ತು: ವಿಳಂಬಕ್ಕೆ ಕಾರಣರಾದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ತೆಗೆದುಕೊಂಡ ಕ್ರಮ ಏನು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ತೀರ್ಥಹಳ್ಳಿ ಹೊಸನಗರ ಮತ್ತು ಸಾಗರ ತಾಲ್ಲೂಕಿನ ಮಜಿರೆ ಹಳ್ಳಿಗಳಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ನೀಡಲು ಆರ್.ಇ.ಸಿ. ಸಂಸ್ಥೆಯಿಂದ ಈವರೆಗೆ ಒಟ್ಟು 584.885 ಲಕ್ಷ ರೂ.ಗಳು ಬಿಡುಗಡೆ ಆಗಿರುತ್ತದೆ.

ಆ) ದಿನಾಂಕ : 30.6.2003ರ ಅಂತ್ಯಕ್ಕೆ ಒಟ್ಟು 400 ಮಜಿರೆ ಹಳ್ಳಿಗಳ ಕಾಮಗಾರಿ ಪೂರ್ಣಗೊಂಡಿದೆ. ತಾಲ್ಲೂಕುವಾರು ವಿವರ ಕೆಳಗಿನಂತಿದೆ.

1. ಸಾಗರ 130
2. ಹೊಸನಗರ 75
3. ತೀರ್ಥಹಳ್ಳಿ 195

ಇ) ಈ ಕಾಮಗಾರಿಗಳು 1999–2000ನೇ ಸಾಲಿನಲ್ಲಿ ಪ್ರಾರಂಭವಾಯಿತು. ಈ ಮುಂಚಿನ ಕರಾರಿನ ಪ್ರಕಾರ ಈ ಕಾಮಗಾರಿಗಳನ್ನು ಆರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕಾಗಿತ್ತು. ಆದರೆ, ಕಾಮಗಾರಿಗಳ ವಿಳಂಬಕ್ಕೆ ಮುಖ್ಯ ಕಾರಣಗಳಾದ, ಅರಣ್ಯ ಇಲಾಖೆಯಿಂದ ಪಡೆದುಕೊಳ್ಳಬೇಕಾದ ಒಪ್ಪಿಗೆ, ಈ ಪ್ರದೇಶದಲ್ಲಿನ ಅಧಿಕ ಮಳೆ, ಹಲವು ಪ್ರದೇಶಗಳು ಗುಡ್ಡಗಾಡಿನಿಂದ ಕೂಡಿರುವುದು. ಹಲವು ಸಂದರ್ಭಗಳಲ್ಲಿ ಸಾರ್ವಜನಿಕರು ಒಡ್ಡಿದ ಅಡಚಣೆಗಳು ಮುಂತಾದ ಕಾರಣಗಳನ್ನು ಮನಗಂಡು, ಈ ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿಯನ್ನು ಮಾರ್ಚ್ 2004ರ ಅಂತ್ಯದವರೆಗೆ ವಿಸ್ತರಿಸಲಾಗಿದೆ. ಆದುದರಿಂದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆಗೊಳ್ಳುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

2545(3399) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿನ ಕುಡಿಯುವ ನೀರಿನ ವಿತರಣಾ ಜಾಲವನ್ನು ಆಧುನೀಕರಣಗೊಳಿಸಿ ಬಲಪಡಿಸಬೇಕಾದ ಅವಶ್ಯಕತೆಯನ್ನು ಸರ್ಕಾರವು ಮನಗಂಡಿದೆಯೇ;

ಆ) ಹಾಗಿದ್ದಲ್ಲಿ ಈ ದಿಶೆಯಲ್ಲಿ ಸರ್ಕಾರವು ಏನಾದರೂ ಕ್ರಮ ಕೈಗೊಂಡಿದೆಯೇ:

ಇ) ಕೈಗೊಂಡಿದ್ದಲ್ಲಿ ಇದರ ವಿವರಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

ಅ) ಹೌದು.

ಆ) ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದು ವಿತರಣಾ ಜಾಲದ ಆಧುನೀಕರಣಕ್ಕೆ ರೂ. 820.00 ಲಕ್ಷಕ್ಕೆ ಅಂದಾಜುಗಳನ್ನು ಜಲ ಮಂಡಳಿಯು ತಯಾರಿಸಿದೆ.

ಇ) ಈ ದಿಶೆಯಲ್ಲಿ ವಿತರಣಾ ಕೊಳವೆ ಜಾಲದ ಆಧುನೀಕರಣದ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತಯಾರಿಸಿದ್ದು ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ ಕೂಡಲೇ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.